**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 87/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 28-10-2025** **ಪಿ ಡಬ್ಲ್ಯೂ 1**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎ ವಿ ಎಂ ವಕೀಲರಿಂದಃ

ಹರಿಹರದಲ್ಲಿನ ಸರ್ವೆ ನಂ. 22,23 ಮತ್ತು 27 ಮೂಲತಃ ಮೈಸೂರು ಕಿರ್ಲೋಸ್ಕರ ಕಂಪನಿಯ ಆಸ್ತಿಗಳು ಎಂದರೆ ಸರಿ. ಸದರಿ ಮೈಸೂರು ಕಿರ್ಲೋಸ್ಕರ ಕಂಪನಿ 2000 ರಲ್ಲಿ ಮುಚ್ಚಿರುತ್ತದೆ ಎಂದರೆ ಸರಿ. 1949 ರಿಂದ 1957 ರವರೆಗೆ ಮೈಸೂರು ಕಿರ್ಲೋಸ್ಕರ ಕಂಪನಿಯನ್ನು ಪ್ರಾರಂಭಿಸುವ ಸಲುವಾಗಿ ಸಾಕಷ್ಟು ಸರ್ವೆ ನಂಬರಗಳನ್ನು ಖರೀದಿಸಿದ್ದರು ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತೇನೆ ಎಂದು ನನಗೆ ಮಾಹಿತಿ ಇದೆ. ನನ್ನ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿದ ತಕರಾರನ್ನು ನಾನು ತಿಳಿದುಕೊಂಡಿರುತ್ತೇನೆ. ವಾದಿ ಸೊಸೈಟಿಗೆ ನಾನು 2010 ರಲ್ಲಿ ಸೆಕ್ರೆಟರಿಯಾಗಿ ನೇಮಕಗೊಂಡಿರುತ್ತೇನೆ. 2010 ರ ಪೂರ್ವದಲ್ಲಿನ ವಾದಿ ಸಂಸ್ಥೆಯ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಕಂಪನಿ ಮುಚ್ಚಿದ ನಂತರ 2000 ರ ನಂತರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಲಿಕ್ವಿಡಿಟರ್ ರವರನ್ನು ನೇಮಕ ಮಾಡಿತ್ತು ಎಂದರೆ ಸರಿ. ಮೈಸೂರು ಕಿರ್ಲೋಸ್ಕರ ಕಂಪನಿ ದಾವಾ ಆಸ್ತಿಗಳನ್ನು ಯಾವ ಉದ್ದೇಶಕ್ಕೆ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಮೈಸೂರು ಕಿರ್ಲೋಸ್ಕರ ಕಂಪನಿ ಸರ್ಕಾರದಿಂದ 203 ಎಕರೆ 0.15 ಗುಂಟೆ ಜಮೀನನ್ನು ಹರಿಹರ ಮತ್ತು ಹರ್ಲಾಪುರದಲ್ಲಿ ಪಡೆದಿದ್ದರು ಎಂದರೆ ಸರಿ. ತದನಂತರ ಸಾಗುವಳಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಪರಿವರ್ತನೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಮೈಸೂರು ಕಿರ್ಲೋಸ್ಕರ ಕಂಪನಿಯ ಸಮಸ್ತ ಆಸ್ತಿಯನ್ನು ಲಿಕ್ವಿಡಿಟರ್ ರವರಿಗೆ ನೀಡಲಾಗಿತ್ತು ಎಂದರೆ ಸಾಕ್ಷಿಯು ಅದಕ್ಕಿಂತ ಪೂರ್ವದಲ್ಲಿ ದಾವಾ ಆಸ್ತಿಯನ್ನು ವಾದಿ ಸೊಸೈಟಿಗೆ ಗೇಣಿ ನೀಡಿದ್ದರು ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ಮೈಸೂರು ಕಿರ್ಲೋಸ್ಕರ ಕಂಪನಿಯನ್ನು ಮತ್ತು ಅದರ ಲಿಕ್ವಿಡಿಟರ್ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಕಂಪನಿಯ ಸಮಸ್ತ ದಾಖಲೆಗಳನ್ನು ಲಿಕ್ವಿಡಿಟರ್ ರವರ ಬಳಿ ಇರುತ್ತವೆ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ